ಅನುಬಂಧ

ಮಂಡ್ಯ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಎಂ.ಯು.ಎಸ್.ಎಸ್.ಗಳ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ಎಂಯುಎಸ್ಎಸ್ ಸ್ಥಾಪನೆಯಾಗುವ ಊರಿನ ಹೆಸರು ಮತ್ತು ತಾಲ್ಲೂಕು	ಎಂಯುಎಸ್ಎಸ್ ಸಾಮರ್ಥ್ಯ ಎಂ.ವಿ.ಎ.ಗಳಲ್ಲಿ	ಕಾಮಗಾರಿಗಳ ಪ್ರಗತಿಯ ಹಂತದ ಬಗ್ಗೆ ವಿವರಗಳು
1.	ಸಂತೇಬಾಚಹಳ್ಳಿ, ಕೆ.ಆರ್. ಪೇಟೆ ತಾಲ್ಲೂಕು	66 : 11 ಕೆವಿ. 1.63 ಎಂ.ವಿ.ಎ	ಜಮೀನು ಸ್ವಾಧೀನಪಡಿಸಿ ಕೊಂಡಿದೆ. ನಿರ್ಮಾಣ ಕಾರ್ಯಗಳನ್ನು "ಟರ್ನ್ ಕೀ" ಆಧಾರದ ಮೇಲೆ ಕೈಗೊಳ್ಳಲು ಟೆಂಡರುಗಳನ್ನು ಕರೆಯಲಾಗಿದೆ.
2.	ಅದ್ದಿಹಳ್ಳಿ ನಾಗಮಂಗಲ ತಾಲ್ಲೂಕು	66 : 11 ಕೆ.ವಿ. 1.63 ಎಂ.ವಿ.ಎ	-"-
3.	ಅರಕೆರೆ ಶ್ರೀರಂಗಪಟ್ಟಣ ತಾಲ್ಲೂಕು	66 :11 ಕೆವಿ. 1.63 ಎಂ.ವಿ.ಎ	-"-
4.	ಬಸರಾಳು ಮಂಡ್ಯ ತಾಲ್ಲೂಕು	66 : 11 ಕೆವಿ. 1.63 ಎಂ.ವಿ.ಎ	-"-
5.	ಹಂಪಾಪುರ ಮಂಡ್ಯ ತಾಲ್ಲೂಕು	66 : 11 1.8 ಎಂ.ವಿ.ಎ	-"-

ಸಂಪರ್ಕ ನಾಲೆ ಕಾಮಗಾರಿಗಳಿಗೆ ಹಣ ಪಾವತಿ

5014 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಪರ್ಕ ನಾಲೆ 12ನೇ ಕಿ.ಮೀ. ಡೀಪ್ ಕಟ್ ಕಾಮಗಾರಿ ಮತ್ತು ಇದೇ ಸಂಪರ್ಕ ನಾಲೆಯ 17ನೇ ಮತ್ತು 18ನೇ ಕಿ.ಮೀ.ನಲ್ಲಿನ ಸುರಂಗ ನಿರ್ಮಾಣದ ಕಾಮಗಾರಿಯ ಅಂದಾಜು ಮೊತ್ತವೆಷ್ಟು?

ಆ) ಈ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಪಾವತಿ ಮಾಡಿರುವ ಹಣದ ಮೊತ್ತವೆಷ್ಟು?

ಇ) ಇನ್ನೂ ಪಾವತಿ ಮಾಡಬೇಕಾಗಿರುವ ಹಣದ ಮೊತ್ತವೆಷ್ಟು?

ಈ) ಹಾಗೂ ಹೆಚ್ಚುವರಿ ಪಾವತಿ ಮಾಡಿರುವ ಹಣಕ್ಕೆ ನಿಯಮಾವಳಿಗಳ ರೀತ್ಯ ಅನುಮತಿ ಪಡೆಯಲಾಗಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಸಂಪರ್ಕ ನಾಲೆ ಸ : 11000 ರಿಂದ 12000 ಮೀ.ವರೆಗೆ 12ನೇ ಕಿ.ಮೀ. ಭೂ ಅಗೆತ ಕಾಮಗಾರಿಗಾಗಿ ರೂ. 85 ಲಕ್ಷಗಳಿಗೆ ಹಾಗೂ 17 ಮತ್ತು 18ನೇ ಕಿ.ಮೀ. ಸುರಂಗ ನಿರ್ಮಾಣದ ಕಾಮಗಾರಿಗಾಗಿ ರೂ. 785 ಲಕ್ಷಗಳಿಗೆ ಮಂಜೂರಾಗಿತ್ತು.

ಆ) ಸಂಪರ್ಕ ನಾಲೆ 12 ಕಿ.ಮೀ. ಕಾಮಗಾರಿಗೆ ರೂ. 274.95 ಲಕ್ಷ ಹಾಗೂ ಸುರಂಗ ಕಾಮಗಾರಿಗೆ ರೂ. 1082 ಲಕ್ಷಗಳನ್ನು ಹೆಚ್ಚುವರಿಯಾಗಿ ಪಾವತಿಸಿದೆ.

ಇ) ಸಂಪರ್ಕ ನಾಲೆಯ 12ನೇ ಕಿ.ಮಿ. ಕಾಮಗಾರಿಯಲ್ಲಿ ರೂ. 12.25 ಲಕ್ಷಗಳ ಬಿಲ್ಲುಗಳು ಬಾಕಿ ಇರುತ್ತವೆ. ಸುರಂಗ ಕಾಮಗಾರಿಯಲ್ಲಿ ಯಾವುದೇ ಬಾಕಿ ಇರುವುದಿಲ್ಲ.

ಈ) ಇಲ್ಲ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ

5016 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಂಜೂರಾಗಿದ್ದು ವಿದ್ಯುತ್ ಸಂಪರ್ಕ ಕೊಡದೆ ಉಳಿದಿರುವ ರೈತರ ಪಂಪುಸೆಟ್ಟು ಪ್ರಕರಣಗಳ ಸಂಖ್ಯೆ ಎಷ್ಟು? ಎಂದಿನಿಂದ ಬಾಕಿ ಇವೆ.

ಆ) ಐ.ಆರ್.ಡಿ.ಪಿ, ಪಿ.ಎಲ್.ಡಿ. ಬ್ಯಾಂಕ್ ಮುಂತಾದ ಸಂಸ್ಥೆಯಲ್ಲಿ ಸಾಲ ಪಡೆದು ಪಂಪ್ ಖರೀದಿಸಿ ಸಂಪರ್ಕಕ್ಕಾಗಿ ಕಾದಿರುವ ರೈತರು ಸಾಲ ಮರುಪಾವತಿ ಮಾಡಲಾಗಿದೆ ಜಮೀನು ಹರಾಜಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಯಾವ ಕಾರಣಕ್ಕಾಗಿ ವಿದ್ಯುತ್ ಸಂಪರ್ಕ ತಡವಾಗಿದೆ ಎಂದು ಸಂಪರ್ಕ ಕಲ್ಪಿಸಲಾಗುವುದು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) 30.9.2000 ಅಂತ್ಯದವರೆಗೆ ಒಟ್ಟು 224 ಅರ್ಜಿಗಳು ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿದೆ. ಬಾಕಿ ಇರುವ ಅರ್ಜಿಗಳ ವರ್ಷಾವಾರು ವಿವರಗಳು ಕೆಳಕಂಡಂತಿವೆ,

ವರ್ಷ	ಬಾಕಿ ಇರುವ ಅರ್ಜಿಗಳು
1993-94	50
1994-95	73